# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 930 (1071)

ಸದಸ್ಯರ ಹೆಸರು : ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 25.08.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಬ್ಬನ್ ಪಾರ್ಕ್ ಉದ್ಯಾನವನದಲ್ಲಿ ರಜಾ ದಿನಗಳಂದೂ ವಾಹನಗಳ ಪ್ರವೇಶಕ್ಕೆ ನಿರ್ಬಂಧ ವಿಧಿಸಿರುವುದಕ್ಕೆ ಪ್ರಮುಖ ಕಾರಣಗಳೇನು: (ಮಾಹಿತಿ ನೀಡುವುದು) | ಕಬ್ಬನ್ ಉದ್ಯಾನವನವು ಬೆಂಗಳೂರು ನಗರದ ಹೃದಯಭಾಗದಲ್ಲಿದ್ದು, ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ಸಾರ್ವಜನಿಕರು, ನಡಿಗೆದಾರರು, ಮಕ್ಕಳು, ವಯೋವೃದ್ಧರು ಮತ್ತು ಪ್ರವಾಸಿಗರು ಅಧಿಕ ಸಂಖ್ಯೆಯಲ್ಲಿ ಉದ್ಯಾನವನದ ಸೊಬಗನ್ನು ಆಹ್ಲಾದಿಸುತ್ತಾರೆ. ಅದರಲ್ಲಿಯೂ ವಿಶೇಷವಾಗಿ ರಜಾ ದಿವಸಗಳಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯಾನವನದಲ್ಲಿ ವಿಹರಿಸಲು ಮಕ್ಕಳು ಮತ್ತು ಸಾರ್ವಜನಿಕರು ಆಗಮಿಸುತ್ತಾರೆ. ಕಬ್ಬನ್ ಉದ್ಯಾನವನದಲ್ಲಿ ವಾಹನ ಸಂಚಾರದಿಂದ ವಾಯು ಮಾಲಿನ್ಯ ಮತ್ತು ಶಬ್ದ ಮಾಲಿನ್ಯವು ಅಧಿಕವಾಗಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಇದನ್ನು ನಿಯಂತ್ರಿಸುವ ಉದ್ದೇಶದಿಂದ ಕಬ್ಬನ್ ಉದ್ಯಾನವನದ ಒಳಭಾಗದ ರಸ್ತೆಗಳಲ್ಲಿ ಪೊಲೀಸ್ ಅಧಿಸೂಚನೆ ಸಂಖ್ಯೆ: ಅಸೂ/01/ಜೆಸಿಪಿ(ಸಂ)/2020, ದಿನಾಂಕ: 10-01-2020 ರಂತೆ ಕಬ್ಬನ್ ಉದ್ಯಾನವನದ ಒಳ ರಸ್ತೆಗಳಲ್ಲಿ ಪ್ರತಿ ಮಾಹೆಯ ಭಾನುವಾರ ಮತ್ತು 2 ನೇ ಮತ್ತು 4 ನೇ ಶನಿವಾರಗಳಂದು ಹಾಗೂ ರಾಷ್ಟ್ರೀಯ ದಿನಾಚರಣೆಗಳಾದ ಗಣರಾಜ್ಯೋತ್ಸವ ಜನವರಿ–26, ಸ್ವಾತಂತ್ರ್ಯ ದಿನಾಚರಣೆ ಆಗಸ್ಟ್-15 ಹಾಗೂ ಗಾಂಧಿಜಯಂತಿ ಆಕ್ಟೋಬರ್-2 ರಂದು ಮತ್ತು ಸಾರ್ವಜನಿಕ ರಜಾ ದಿನಗಳಂದು ವಾಹನಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ.<br><br>ಕಬ್ಬನ್ ಉದ್ಯಾನವನದಲ್ಲಿ ರಜಾ ದಿನಗಳಂದು ಸಾರ್ವಜನಿಕರು, ಪ್ರವಾಸಿಗರು ಹಾಗೂ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವುದರಿಂದ ಮತ್ತು ರಜಾ ದಿನಗಳಂದು ಕಬ್ಬನ್ ಉದ್ಯಾನವನ ವ್ಯಾಪ್ತಿಯಲ್ಲಿರುವ ಬಾಲಭವನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಭೇಟಿ ನೀಡುವುದರಿಂದ, ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಮಕ್ಕಳ ಸ್ವಚ್ಛಂದ ವಿಹಾರಕ್ಕಾಗಿ ಕಬ್ಬನ್ ಉದ್ಯಾನವನದ ವಾಯುವಿಹಾರಿಗಳ ಸಂಘ ಹಾಗೂ ಕಬ್ಬನ್ ಉದ್ಯಾನವನ ಸಂರಕ್ಷಣಾ ಸಮಿತಿಯ ಸದಸ್ಯರು ಕಬ್ಬನ್ ಉದ್ಯಾನವನದಲ್ಲಿ ರಜಾ ದಿನಗಳಂದು ವಾಹನ ಸಂಚಾರವನ್ನು ನಿರ್ಬಂಧಿಸುವಂತೆ ಒತ್ತಾಯಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ವಾಹನ |

| | | |
|---|---|---|
| | | ಸಂಚಾರವನ್ನು ನಿರ್ಬಂಧಿಸಲಾಗಿರುತ್ತದೆ. |
| ಆ) | ಕಬ್ಬನ್ ಪಾರ್ಕ್ ಉದ್ಯಾನವನ ಭಾಗದಲ್ಲಿ ರಜಾ ದಿನಗಳಲ್ಲಿ ವಾಹನಗಳ ಸಂಚಾರಕ್ಕೆ ಸಂಬಂಧಿಸಿದಂತೆ ವಿಧಿಸಲಾಗುತ್ತಿರುವ ನಿಯಮಗಳು ಹಾಗೂ ನಿರ್ಬಂಧಗಳಿಂದ ಸಾರ್ವಜನಿಕರಿಗೆ ಉಂಟಾಗುತ್ತಿರುವ ತೊಂದರೆಗಳ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕಬ್ಬನ್ ಪಾರ್ಕ್ ಉದ್ಯಾನವನ ಭಾಗದಲ್ಲಿ ರಜಾ ದಿನಗಳಲ್ಲಿ ವಾಹನಗಳ ಸಂಚಾರಕ್ಕೆ ಸಂಬಂಧಿಸಿದಂತೆ ವಿಧಿಸಲಾಗುತ್ತಿರುವ ನಿಯಮಗಳು ಹಾಗೂ ನಿರ್ಬಂಧಗಳಿಂದ ಸಾರ್ವಜನಿಕರಿಗೆ ತೊಂದರೆಗಳು ಉಂಟಾಗುತ್ತಿರುವುದರ ಬಗ್ಗೆ ಮನವಿಗಳು ಅಥವಾ ದೂರುಗಳು ಬಂದಿರುವುದಿಲ್ಲ. |
| ಇ) | ಕಬ್ಬನ್ ಪಾರ್ಕ್ ಸುತ್ತಮುತ್ತ ರಜಾ ದಿನಗಳಲ್ಲಿ ಉಂಟಾಗುವ ವಾಹನ ದಟ್ಟಣೆ ಮತ್ತು ಪಾರ್ಕಿಂಗ್ ಸಮಸ್ಯೆ ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ಮಾಹಿತಿ ನೀಡುವುದು) | ಕಬ್ಬನ್ ಉದ್ಯಾನವನ ವ್ಯಾಪ್ತಿಯ ಕ್ವೀನ್ಸ್ ವಿಕ್ಟೋರಿಯಾ ಪ್ರತಿಮೆಯ ಮುಖ್ಯ ದ್ವಾರದಿಂದ ಕಿಂಗ್ ಎಡ್ವರ್ಡ್ ಪ್ರತಿಮೆಯವರೆಗೆ ಒಂದು ಬದಿಯಲ್ಲಿ ಮತ್ತು KSLTA ಸ್ಟೇಡಿಯಂ ಹಿಂಭಾಗದ ಪ್ರದೇಶದಲ್ಲಿ ಹಾಗೂ ಹಳೆಯ KGID ಕಟ್ಟಡದ ಪಕ್ಕದಲ್ಲಿ ರಜಾ ದಿನಗಳಂದು ನಿಗಧಿತ ಶುಲ್ಕ ಪಾವತಿಯ ಆಧಾರದ ಮೇಲೆ ಸಾರ್ವಜನಿಕರ ವಾಹನಗಳ ನಿಲುಗಡೆಗೆ ಅವಕಾಶವನ್ನು ಕಲ್ಪಿಸಲಾಗಿರುತ್ತದೆ |
| ಈ) | ಹಿರಿಯ ನಾಗರಿಕರು. ಅಂಗವಿಕಲರು, ಮಕ್ಕಳು ಹಾಗೂ ತುರ್ತು (ಅಂಬುಲೆನ್ಸ್) ಅಗತ್ಯವಿರುವವರಿಗೆ ಕಬ್ಬನ್ ಪಾರ್ಕ್ ಒಳಗೆ ರಜಾ ದಿನಗಳಲ್ಲಿ ವಾಹನ ಪ್ರವೇಶಕ್ಕೆ ಯಾವುದೇ ವಿಶೇಷ ವ್ಯವಸ್ಥೆ ಇದೆಯೇ? | ಹಿರಿಯ ನಾಗರಿಕರು, ಅಂಗವಿಕಲರು, ಮಕ್ಕಳು ಕಬ್ಬನ್ ಪಾರ್ಕ್ ಒಳಗೆ ರಜಾ ದಿನಗಳಲ್ಲಿ ಪ್ರವೇಶಿಸುವ ಸಲುವಾಗಿ ತೋಟಗಾರಿಕೆ ಇಲಾಖೆಯ ವತಿಯಿಂದ ಉಚಿತವಾಗಿ ವೀಲ್ ಚೇರ್ ವ್ಯವಸ್ಥೆಯನ್ನು ಮಾಡಲಾಗಿದ್ದು, ಅಗತ್ಯವಿರುವವರು ಗುರುತಿನ ದಾಖಲಾತಿಗಳನ್ನು ಸಲ್ಲಿಸಿ ವೀಲ್ ಚೇರ್ ಗಳನ್ನು ಉದ್ಯಾನವನದ ಒಳ ಆವರಣದಲ್ಲಿ ಬಳಸಲು ಅವಕಾಶವನ್ನು ನೀಡಲಾಗಿದೆ.<br><br>ತುರ್ತು ಸಂದರ್ಭಗಳಲ್ಲಿ, ತುರ್ತು ಸೇವೆ (ಆಂಬುಲೆನ್ಸ್) ಗಳಿಗೆ ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಅವಕಾಶವನ್ನು ನೀಡಲಾಗುವುದು. |

ಸಂಖ್ಯೆ: HORTI 477 HGM 2026

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು